# ಕೊರೋನ ಸಂದರ್ಭದಲ್ಲೂ ಸಿಎಂಆರ್‌ನಲ್ಲಿ ಶೇ.100ರಷ್ಟು ಕ್ಯಾಂಪಸ್ ನಿಯೋಜನೆ

ಬೆಂಗಳೂರು, ಅ.13: 'ಕೊರೋನ ಸಾಂಕ್ರಾಮಿಕ ಔದ್ಯೋಗಿಕ ಮಾರುಕಟ್ಟೆಯಲ್ಲಿಯ ಕುಸಿತ ಸೇರಿದಂತೆ ಅನೇಕ ಆತಂಕಗಳನ್ನು ಹುಟ್ಟುಹಾಕಿದೆ. ಆದರೆ, ಸಿಎಂಆರ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ವಿಷಯಕ್ಕೆ ಬಂದರೆ, ನೇಮಕಾತಿಯ ಮೇಲೆ ಯಾವುದೇ ಪರಿಣಾಮ ಬೀರಿಲ್ಲ. ವಿವಿಯು ಸಂಕಷ್ಟದ ಸಂದರ್ಭದಲ್ಲೂ ತನ್ನ ವಿದ್ಯಾರ್ಥಿಗಳನ್ನು ದೇಶದ ಉನ್ನತ ಕಂಪೆನಿಗಳಲ್ಲಿ ನೇಮಕ ಮಾಡಿಸಿದೆ.

120 ಉನ್ನತ ಸಂಸ್ಥೆಗಳು ತಮ್ಮ ವರ್ಚುವಲ್ ಮೋಡ್ ಮೂಲಕ ಸಿಎಂಆರ್ ವಿ.ವಿ.ಯಿಂದ ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳನ್ನು ನೇಮಿಸಿಕೊಂಡಿವೆ. ಕೌಶಲ್ಯದೊಂದಿಗೆ ಶಿಕ್ಷಣವನ್ನು ನೀಡುವುದು ಸಿಎಂಆರ್ ವಿವಿ ವಿದ್ಯಾರ್ಥಿಗಳಿಗೆ ಪ್ಲಸ್ ಪಾಯಿಂಟ್ ಆಗಿದೆ. ವಿವಿ ತನ್ನ ಎಂಬಿಎ ಮತ್ತು ಇತರ ವಿದ್ಯಾರ್ಥಿಗಳಿಗೆ ಉದ್ಯಮ ಆಧಾರಿತ ಶಿಕ್ಷಣವನ್ನು ಒದಗಿಸುತ್ತಿದೆ ಎಂದು ತಿಳಿಸಲಾಗಿದೆ. ಸಿಎಂಆರ್ ವಿವಿಯಿಂದ ಹೊಸದಾಗಿ ಎಂಬಿಎ ಪದವೀಧರರಾಗಿರುವ ಸುಬ್ಬಯ್ಯ ಕೆ.ಕೆ. ಅವರಿಗೆ ವರ್ಷಕ್ಕೆ 7 ಲಕ್ಷ ರೂ.ಗಳ ವೇತನ ಪ್ಯಾಕೇಜ್ ಪಡೆದಿದ್ದಾರೆ, ಅಶುತೋಷ್ ಕುಮಾರ್, ಕ್ಯಾಲೆಬ್ ಎಸ್., ಹನಿ ಸೈಯದ್ ಮತ್ತು ಅಖಿಲ್ ಹುಿ ಅವರು ವಾರ್ಷಿಕ 6 ಲಕ್ಷ ರೂ. ಪ್ಯಾಕೇಜ್ ಪಡೆದಿದ್ದಾರೆ. ಸಿಎಂಆರ್‌ನ ಹೊಸ ಎಂಬಿಎ ಪದವೀಧರರಿಗೆ ಸರಾಸರಿ ನೀಡಲಾದ ವೇತನ 4.3 ಲಕ್ಷ ರೂ. ಬಿಬಿಎ ವಿಭಾಗದಲ್ಲಿ ಕೆಲವು ವಿದ್ಯಾರ್ಥಿಗಳಿಗೆ ವಾರ್ಷಿಕ 6 ಲಕ್ಷ ರೂ., ಬಿ.ಟೆಕ್ ವಿಭಾಗದ ಪದವೀಧರರು ವಾರ್ಷಿಕ 11 ಲಕ್ಷ ರೂ. ವರೆಗೂ ಪ್ಯಾಕೇಜ್ ಪಡೆದುಕೊಂಡಿದ್ದಾರೆ.